*ರೇಷ್ಮಾ ಫೈಝುಲ್ಲಾ, ಸಂತೇಬೆನ್ನೂರು*
*ಸತ್ತ ಮೇಲೂ ನಮ್ಮ ಜೊತೆಗೆ ಏನು ಬರ್‍ತದೆ ಸಾರ್?*



ಕಾರ್ಪೋರೇಷನ್ ವ್ಯಾನು, ಕಾಫಿನ್ನು!

*ಮಾಲತಿರಾಜು, ಬೆಂಗಳೂರು*
*ಅನಾಥಾಶ್ರಮ, ವೃದ್ಧಾಶ್ರಮಗಳು ಹೆಚ್ಚಾಗುತ್ತಿರಲು ಕಾರಣ?*
ದಾರಿದ್ರ್ಯ, ಹೃದಯ ದಾರಿದ್ರ್ಯ ಹೆಚ್ಚಿರುವುದರಿಂದ!

*ಸುರಭಿ ಕೆ.ಎಸ್. ದೊಡ್ಡಬಳ್ಳಾಪುರ*
*ಸತ್ಯವನ್ನೇ ನುಡಿಯಿರಿ ಎಂದರು ಗಾಂಧಿ, ಸತ್ಯವಂತರಿಗಿದು ಕಾಲವಲ್ಲ ಎಂದರು ದಾಸರು. ನಾವು ಹೇಗಿರಬೇಕು?*
ಕಾಲವಲ್ಲ ಎಂದರೆ ಯಮಸದೃಶವಲ್ಲ ಎಂದರ್ಥವಂತೆ! ಸತ್ಯಂ ಕಂಪನಿ ಹೊರತಾಗಿ ಸತ್ಯ ಎಲ್ಲೆಡೆಯೂ ನಿತ್ಯ!

*ಕೆ.ಸಿ.ಸತ್ಯನಾರಾಯಣ, ದೊಡ್ಡಬಳ್ಳಾಪುರ*
*ಉತ್ತರಭೂಪ ಮೊದಲ್ಗೊಂಡು ರಾಮ್ ವರೆಗೂ ತಮ್ಮ ನಿಜನಾಮವನ್ನು ಮರೆಮಾಚುವ ಕಾರಣವೇನು?*
ಉತ್ತರದ ಸುಧೆಯನ್ನು ಪೂರ್ವಾಗ್ರಹವಿಲ್ಲದೆ ಆರಾಮವಾಗಿ ಓದುಗ ಭೂಪ ಅನುಭವಿಸಲೆಂದು!

*ಕೀರ್ತಿ ವಿಜಯ್ ಜೈನ್, ಬೆಂಗಳೂರು*
*ಎಲ್ಲಾ ಮೊಬೈಲ್ ಫೋನ್‌ಗಳ ಸಂಖ್ಯೆ 9ರಿಂದಲೇ ಪ್ರಾರಂಭವಾಗಲು ಕಾರಣವೇನು ಗುರು?*



ಮಾನವನಿಗೂ, ದಾನವನಿಗೂ ನವ ಶುಭಸಂಖ್ಯೆಯೆಂಬ ನಂಬಿಕೆ!

*ರಾಘವೇಂದ್ರ ನಲವಡೆ, ನರಗುಂದ*
*ಉಜ್ವಲ ಭವಿಷ್ಯ ಕಾಣಬೇಕೆನ್ನುವ ತರುಣ ಮೊದಲು ಮಾಡಬೇಕಾದ ಕೆಲಸ ಯಾವುದು?*
ಟಿವಿಯಲ್ಲಿ ಭವಿಷ್ಯ ಹೇಳುವ ದುರ್ಮಾರ್ಗ ಹಿಡಿಯುವುದು.

*ಎಂ.ಬಿ.ಕೋದಾನಪೂರ, ಸವದತ್ತಿ*
*ಕೆಲವರು ಹಾವನ್ನು ಬಡಿದು ಹದ್ದಿಗೆ ಹಾಕುವುದೇಕೆ?*
ಹಾವಿನ ವರ್ತನೆ ಹದ್ದು ಮೀರಿರುವುದರಿಂದ!

*ದೇಬೂರು ಮಂಜುನಾಥ, ಮೈಸೂರು*
*ಸಾಮಾನ್ಯವಾಗಿ ಪ್ರತಿಯೊಬ್ಬರೂ ಬಸ್ಸಿನಲ್ಲಿ ಕುಳಿತು ಪ್ರಯಾಣ ಮಾಡುವಾಗ ತೂಕಡಿಸುವುದು ಏಕೆ?*
ನಿಂತು ಪ್ರಯಾಣ ಮಾಡುವಾಗ ತೂಕಡಿಸಿದರೆ ಮೂಗು ಜಜ್ಜುವುದರಿಂದ!

*ಗ್ರೆಗರಿ ಕ್ವಾಡ್ರಸ್, ಪದ್ಮನೂರು*
*ಸ್ತ್ರೀಗೂ, ಇಸ್ತ್ರೀಗೂ ಏನು ವ್ಯತ್ಯಾಸ?*
ಸ್ತ್ರೀ ಇಲ್ಲದಿದ್ದರೆ ಮನ ಮುದುಡುತ್ತದೆ, ಇಸ್ತ್ರೀ ಇಲ್ಲದಿದ್ದರೆ ಬಟ್ಟೆ ಮುದುಡುತ್ತದೆ!

*ಆದಿನಾರಾಯಣಮುನಿ, ಆದಿವಾಲ*
*ಮುಕ್ತ ಎಂದರೆ?*
ಮುಕ್ತ ಧಾರವಾಹಿಯ ನಂತರ ಬರುವ ಧಾರವಾಹಿಯ ಹೆಸರು. ನಂತರ ಮುಕ್ತ, ಮುಕ್ತೆ, ಮುಕ್ತೋ... ಮುಕ್ತಃ!

*ಜಾಕೋಬ್ ಡಿಸೋಜ, ಕುರುವಳ್ಳಿ*
*ಲಂಚವಿಲ್ಲದೆ ನಡೆಯುವ ಸರ್ಕಾರಿ ಕೆಲಸ ಯಾವುದು ಸಾರ್?*
ಮಂತ್ರಿಗಳಿಗೆ ಸಂಬಳ, ಭತ್ಯೆ ನೀಡುವುದು.

*ಸಾವಿತ್ರಮ್ಮ ಕೆ ವಿಭೂತಿ, ಹರಿಹರ*
*ಗ್ರಹಣಕ್ಕೂ, ಗ್ರಹಚಾರಕ್ಕೂ ಎತ್ತಣ ಸಂಬಂಧ ಅಂಕಲ್?*
ಪಾಣಿಯ ಸಂಬಂಧ! ಪಾಣಿಗ್ರಹಣವೇ ಗ್ರಹಚಾರಕ್ಕೆ ಕಾರಣ ಅಂಟಿ.

*ರಜನಿ ಎಸ್, ಬೆಂಗಳೂರು*
*ಇಬ್ಬರ ಜಗಳದಲ್ಲಿ ಮೂರನೆಯವನು ತುಪ್ಪ ಸುರಿದರೆ?*
ಅವನು ವಕೀಲನೋ, ರಾಜಕಾರಣಿಯೋ ಆಗಿರುತ್ತಾನೆ!

*ಟಿ.ಆರ್.ರವೀಂದ್ರ, ನಾಗರಭಾವಿ*
*ಹುಟ್ಟಿದವರಿಗೆ ಹಬ್ಬ, ಸತ್ತವರಿಗೆ ತಿಥಿ, ಬದುಕಿರುವವರಿಗೆ?*
ಎರಡು ಸಂದರ್ಭಗಳಲ್ಲೂ ಪುಷ್ಕಳ ಭೋಜನ!

*ಅಶ್ವಿನಿ ವಿ ಹೆಗಡೆ, ಭೈರುಂಬೆ*
*ರಾಮಾಯಣದ ರಾಮನಿಗೂ, ನೀವು ಕೇಳಿದಿರಿ ರಾಮನಿಗೂ ಏನು ವ್ಯತ್ಯಾಸ?*
ಆ ರಾಮ ಏಕಪತ್ನೀ ಎಂದ, ಈ ರಾಮ ಏಕೆ ಪತ್ನಿ? ಎನ್ನುತ್ತಾನೆ!

## ಬಹುಮಾನಿತ ಪ್ರಶ್ನೆ

*ಎಸ್.ಜಿ.ರಾಜಶೇಖರರೆಡ್ಡಿ, ಗೌರಿಬಿದನೂರು*
*ಬಸವಣ್ಣ ಲಿಂಗಾಯಿತರಿಗೆ ಸೀಮಿತ, ಕುವೆಂಪು ಒಕ್ಕಲಿಗರಿಗೆ; ಕನಕದಾಸರು ಕುರುಬರಿಗೆ ಎನ್ನುವ ಜನರಿಗೆ ಏನೆನ್ನಬೇಕು?*
ಅನ್ಯರಿಗೆ ಅಸಹ್ಯ ಪಡದೆ ವಿಶ್ವಮಾನವಪಥಕ್ಕೆ ದಾಸರಾಗಿರಿ ಎನ್ನಬೇಕು!

*ಶಿರಾಲಿ ದೀಪಕ್ ಆರ್ ಶೇಟ್, ಬೆಂಗಳೂರು*
*ಕಾಗೆಗೂ, ಕೋಗಿಲೆಗೂ ಇರುವ ವ್ಯತ್ಯಾಸವೇ ಕತ್ತೆಗೂ, ಕುದುರೆಗೂ ಇದೆ. ಯಾವುದು ರಾಮ್?*
ಹಾಡಿಕೊಂಡು, ಸ್ವೈರವಾಗಿ ತಿರುಗುವವರು ಚೆನ್ನಾಗಿರುತ್ತಾರೆ, ಕಷ್ಟ ಪಡುವವರಿಗೆ ಕಷ್ಟ ತಪ್ಪಿದ್ದಲ್ಲ ಎಂಬುದು!

*ಜಿ. ಶಿವಪ್ರಸಾದ, ವಿದ್ಯಾರಣ್ಯಪುರ*
*ಶುಬಾಶಯ, ಶುಭಾಶಯ, ಹಾಗೂ ಶುಭಾಷಯ ಇವುಗಳಲ್ಲಿ ಸರಿಯಾದ ಪದ ಯಾವುದು?*
ಸುಬಾಸಯ ಎಂದಳೊಬ್ಬ ಟಿವಿ ನಿರೂಪಕಿ, ಸುಬ್ಬಾ ಸಾಯಾ.. ಎಂದು ಹಾಡಿದನೊಬ್ಬ ಖಿನ್ನಡಿಗ. ಸರಿಯಾದ ಪದ ಶುಭ+ಆಶಯ ಒಳ್ಳೆಯದಾಗಲಿ ಎಂಬ ಹಾರೈಕೆ!

*ಮಲ್ಲಿಕಾರ್ಜುನ ಗಚ್ಚಿ, ಗೋಗಿ*
*ರಾಜಕಾರಣಿಗಳಿದ್ದಾರೆ ಎಚ್ಚರಿಕೆ ಎಂಬ ಫಲಕ ಎಲ್ಲೂ ಏಕೆ ಇಲ್ಲ? ಎಲ್ಲಿ ಹಾಕಬಹುದು?*
ದುರ್ವಾಸನೆಗೂ ಫಲಕ ಬೇಕೆ? ಹಾಗೂ ಹಾಕಬೇಕೆಂದಿದ್ದರೆ, ನಿದ್ರಿಸುತ್ತಿರುವವರಿಗೆ ಭಂಗ ಬಾರದಿರಲೆಂದು, ವಿಧಾನಸೌಧದ ಮುಂದೆಯೇ ಹಾಕಬೇಕು!

*ಸವಿರವಿ, ಕೊಪ್ಪ*
*ಶ್ರೀಮಂತದಲ್ಲೂ ಶ್ರೀ ಇದೆ, ಶ್ರೀಸಾಮಾನ್ಯದಲ್ಲೂ ಶ್ರೀ ಇದೆಯಲ್ಲಾ... ?*
ಶ್ರೀ ಎಂದರೆ ಸಿರಿಯನ್ನು ಮಂಥ ಎಂದರೆ ಕಡೆಗೋಲಿನಲ್ಲಿ ಕಡೆದಂತೆ ಕಡೆದು ಲಾಭದ ಬೆಣ್ಣೆ ತೆಗೆಯುವವನು ಶ್ರೀಮಂತ, ಏನೂ ಮಾಡದವ ಶ್ರೀಸಾಮಾನ್ಯ!

*ಡಿ.ಎಲ್.ಚಂದ್ರಿಕಾ, ಹರಪನಹಳ್ಳಿ*
*ಕೇಳದೆ, ನೋಡದೆ, ಮಾತನಾಡದೆ ಒಳ್ಳೆಯದು-ಕೆಟ್ಟದ್ದು ಎಂದು ನಿರ್ಧರಿಸಲು ಸಾಧ್ಯವಾ?*



ಓ! ವಾಸನೆಯಿಂದ.

■ ರಾಮ್